**ಪಿ.ಡಬ್ಲ್ಯೂಃ 01**

**ದಿಃ15.09.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್.ಕೆ.ಪಿ ವಕೀಲರಿಂದಃ**

6. ನಾನು ನನ್ನ ಚಿಕ್ಕಪ್ಪ ಅಮರಗುಂಡಯ್ಯ ತಂದೆ ಅಮರಯ್ಯ ಇವರಿಂದ ಖರೀದಿ ನೊಂದಾಯಿತ ಖಬ್ಜರಹಿತ ಖರೀದಿ ಕರಾರು ಪತ್ರ ಬರೆಸಿಕೊಂಡಿರುತ್ತೇನೆ ಅಂದರೆ ಸರಿ. ಸದರಿ ಕರಾರು ಪತ್ರದಲ್ಲಿ ಒಟ್ಟು 14 ಲಕ್ಷ ರೂಪಾಯಿ ಬರೆದಿದ್ದೆವು ಅಂದರೆ ಸರಿ. ಹಣದ ವ್ಯವಹಾರ ಮಾಡಿದಾಗ ನಾನು ಸಾಮಾನ್ಯವಾಗಿ ನೊಂದಣಿ ಖರೀದಿ ಕರಾರು ಪತ್ರಗಳನ್ನು ಮಾಡುತ್ತಾ ನಾನು ಸಾಲ ನೀಡುತ್ತಾ ಬಂದಿರುತ್ತೇನೆ ಅಂದರೆ ಸರಿ. ನಾನು, ನನ್ನ ತಾಯಿಯ ಹೆಸರಿನಲ್ಲಿರುವ ಜಮೀನು, ಚಿಕ್ಕಪ್ಪ ಅಮರಗುಂಡಯ್ಯ ಹೆಸರಿನಲ್ಲಿರುವ ಜಮೀನು, ಮಲ್ಲಿಕಾರ್ಜುನ ತಂದೆ ಅಮರಯ್ಯ ಇವರ ಹೆಸರಿನಲ್ಲಿ ಇರುವ ಜಮೀನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖೆಗೆ ಜಮೀನು ರೈತ ಜನರಿಗೆ ಮಾರಾಟ ಮಾಡುವ ಕುರಿತು ಕರಾರು ಮಾಡಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಆ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಪರಿಶೀಲನೆಗೆ ಬಂದಾಗ ನಾನು ಅವರ ಜೊತೆ ಪೋಟೋ ಪಡೆದಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಮತ್ತು ಆರೋಪಿತನ ಮಧ್ಯ ವ್ಯವಹಾರ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರು ಮಾಡಿಲ್ಲ. ನನ್ನ ಮತ್ತು ಆರೋಪಿತನ ಮಧ್ಯ ಯಾವುದೇ ವ್ಯವಹಾರ ಇಲ್ಲ ಅಂದರೆ ಸರಿಯಲ್ಲ. ಆರೋಪಿತನೊಂದಿಗೆ ಅವರ ಜಮೀನು ಖರೀದಿಸಲುವ ಸಲುವಾಗಿ ಮೌಖಿಕವಾಗಿ ಖರೀದಿ ಒಪ್ಪಂದ ಮಾಡಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದ ವ್ಯವಹಾರದ ಸಲುವಾಗಿ ಆರೋಪಿತನಿಂದ ಚೆಕ್ ಪಡೆದು ಅದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)**

**ಓ.ಹೇ.ಕೆ.ಸರಿ ಇದೆ**

**ಪ್ರ.ದ.ನ್ಯಾದಂ.ಗಳು, ಮಾನ್ವಿ**